**ಮಧ್ಯಂತರ ಅರ್ಜಿಯ ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *23.07.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ** ಶ್ರೀ ಟಿ.ಹೆಚ್.ಕೆ. **ವಕೀಲರಿಂದಃ**

ಗಾಯಾಳು ಚಂದನ್ ಸ್ವತಃ ಒಬ್ಬರೇ ಚಿಕಿತ್ಸೆಗಾಗಿ ಬಂದಿದ್ದರು. ಅವರ ಸಹಿಯನ್ನು ತೆಗೆದುಕೊಂಡಿರುವುದಿಲ್ಲ ಆದರೆ ಅವರ ಎಡಗೈ ಹೆಬ್ಬೆಟಿನ ಗುರುತನ್ನು ತೆಗೆದುಕೊಂಡಿರುತ್ತದೆ. ಗಾಯಾಳು ಚಿಕಿತ್ಸೆಗೆ ಬಂದಾಗ ಪ್ರಜ್ಞಾವಸ್ಥೆಯಲ್ಲಿ ಇದ್ದರು ಗಾಯದ ಪ್ರಮಾಣ ಪತ್ರದಲ್ಲಿ ಆ ಬಗ್ಗೆ ಉಲ್ಲೇಖಿಸಿರುವುದಿಲ್ಲ ಎಂ.ಎಲ್.ಸಿ ಅಲ್ಲಿ ಹೇಳಿರುತ್ತದೆ. ಒಬ್ಬ ವ್ಯಕ್ತಿ ದ್ವಿಚಕ್ರ ವಾಹನದಲ್ಲಿ ಹೋಗುವಾಗ ಮುಳ್ಳು ತಂತಿಯ ಬೇಲಿ ಬಿದ್ದರೆ ನಿಪಿ–7 ರಲ್ಲಿ ಹೇಳುವ 2 ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನಾನು ಗಾಯಾಳುವಿಗೆ ಯಾವುದೇ ಚಿಕಿತ್ಸೆ ನೀಡದೇ ಇದ್ದರೂ ಸಹ ಪೊಲೀಸರ ಕೋರಿಕೆ ಮೇರೆಗೆ ನಿಪಿ–7 ಅನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಡ್ರಾಗರ್ ನಲ್ಲಿ ಏನೇನು ಚಿಹ್ನೆಗಳು ಇದ್ದವು ಎನ್ನುವ ಬಗ್ಗೆ ಹೇಳಿರುವುದಿಲ್ಲ. ಡ್ರಾಗರ್ ನ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಅಳತೆಯ ಅಗಲ ಇತ್ತು ಎನ್ನುವ ಬಗ್ಗೆ ನಮೂದಿಸಿರುವುದಿಲ್ಲ ಆದರೆ ಒಟ್ಟಾರೆ ಅಗಲವನ್ನು ಹೇಳಿರುತ್ತೇನೆ. ಆ ಡ್ರಾಗರ್ ನಲ್ಲಿ ಎಷ್ಟು ಚೂಪಾದ ಹಲ್ಲುಗಳು ಇದ್ದವು ಎಂದು ಹೇಳಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಾನು ನಿಪಿ–8 ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಡ್ರಾಗರ್ ಅನ್ನು ನೋಡಿರಲಿಲ್ಲ, ಆದರೂ ಸಹ ಪೊಲೀಸರ ಕೋರಿಕೆಯ ಮೇರೆಗೆ ನಿಪಿ–8 ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*

***PW-03***

**ಮೈಸೂರು**